ಬಾಗಿಲಿನಿಂದ ಬಂದು ನನ್ನನ್ನು ಭೇಟಿಯಾಗಿ ಹೋಗುತ್ತಾನೆ. ಆ ಚೇಲಾಗಳಿಗಂತೂ ಈ ಗಣೇಶನೇ ದೇವರು. ಅವನು ಮಾತಿನ ಮಧ್ಯೆ ಓಪನ್ನಾಗಿ ಹೂಸು ಬಿಟ್ಟರೂ ಅವರಿಗೆ ನಗು ಬರುವುದಿಲ್ಲ. ಅವನೊಮ್ಮೆ ಬಾತ್‌ರೂಮಿಗೆಂದು ಎದ್ದು ಹೋಗಿದ್ದಾಗ ಹೇಳಿದ್ದೆ ಈ ಚೇಲಾಗಳಿಗೆ, "ಅವನನ್ನು ಅಷ್ಟೆಲ್ಲ ಆರಾಧಿಸಬೇಕಂತಿಲ್ಲ, ನೋಡಿ ಈಗ ನಿಮ್ಮ ತರಹವೇ ಕಕ್ಕ ಇಟ್ಟು ಬರೋದಕ್ಕೆ ಹೋಗಿಲ್ಲವೇ?" ಅವರು ನಗಲಿ ಎಂದು ಕಕ್ಕ ಎನ್ನುವಾಗ ಬೆರಳುಗಳನ್ನು ಗುಂಡಗೆ ಮಡಚಿ ತೋರಿಸಿದ್ದೆ. ನಾನು ಏನು ಹೇಳಿದರೂ ದಪ್ಪ ಮೀಸೆಯ ಅವರು ಗಾಳಿಯಲ್ಲಿ ಕಣ್ಣಿಟ್ಟು ನಿಂತೇ ಇದ್ದರು. ದಾದಾ ಹೇಳಿದ ಎಲ್ಲ ಕಡೆಗೆ ಕಿವಿಗಳಿರುವ ಸಂಗತಿ ನೆನಪಾಗಿ ನಾನೂ ತುಸು ಬೆದರಿ, ಮುದುರಿ ಕುಳಿತೆ.

ಪಬ್ಲಿಶಿಂಗ್ ಸಂಸ್ಥೆ ಅಂತ ಶುರು ಮಾಡಿದ ಮೇಲೆ ಹೀಗೆ ಎಲ್ಲ ವರ್ಗದ ಜನರ ಪರಿಚಯವಾಗೋದು ಸಹಜ. ಇವನಲ್ಲದೇ ಭೂಗತ ಜಗತ್ತಿನ ಇನ್ನಿಬ್ಬರು ದೊರೆಗಳು ನನಗೆ ಪರಿಚಯವಿದ್ದರೂ ಈ ದಾದಾನೇ ನನಗೆ ಖಾಸಾ. ಅವನ ಜೀವನಚರಿತ್ರೆಯನ್ನು ನಾನೇ ನನ್ನ ಪಬ್ಲಿಕೇಷನ್ನಿನಿಂದ ಪ್ರಕಟಿಸುತ್ತಿದ್ದೆ. ನಮ್ಮ ಪ್ರೆಸ್ಸಿನ ಹುಡುಗ ರಾಕೇಶ ಈ ಗಣೇಶನಿಗೆ ಲಿಪಿಕಾರನಾಗಿ ಕೆಲಸ ಮಾಡುತ್ತಿದ್ದ. "ದೊಡ್ಡ ಸಾಹಿತಿಯನ್ನು ಹಿಡಿದೇ ಬರೆಸಬಹುದಿತ್ತು ಸಾರ್. ಅವರು ಒಪ್ಪಿಕೊಳ್ಳದಿದ್ದರೂ ಒಪ್ಪಿಕೊಳ್ಳುವಂತೆ ಮಾಡುವುದೂ ನಮಗೆ ಗೊತ್ತಿದೆ. ಆದರೆ, ಈ ಕಳ್ಳ ಸಾಹಿತಿಗಳು ಮಹಾ ವಾಚಾಳಿಗಳು. ಇತ್ತ ನಮ್ಮ ಚರಿತ್ರೆ ಬರೆದುಕೊಟ್ಟು, ದುಡ್ಡನ್ನೂ ನುಂಗಿಹಾಕಿ ಅನಂತರ ತಮ್ಮ ಹೆಸರಿನಲ್ಲಿ ನಾವೆಲ್ಲು ಬರೆಯೋಕೆ ಶುರುಹಚ್ಚಿ ಬಿಡುತ್ತಾರೆ. ಯಾರನ್ನೇ ನಂಬಿ, ಈ ಗೋಸುಂಬೆಗಳನ್ನು ಮಾತ್ರ ನಂಬಬಾರದು." ಅವನು ಸ್ವತಃ ತನ್ನನ್ನೂ ನಾವು, ನಾವು ಅಂತ ಸಂಬೋಧಿಸಿಕೊಳ್ಳುವುದು ವಿಚಿತ್ರವಾಗಿತ್ತು.

ಸುನೇತ್ರಳಿಗೆ ಈ ದಾದಾನಂಥವರ ನೆರಳು ಕಂಡರೂ ಆಗುವುದಿಲ್ಲ. ಬರಹಗಾರರು, ಹೋರಾಟಗಾರರು, ಚಳವಳಿಯವರು, ಸ್ವಯಂಸೇವಾ ಸಂಘದವರು, ಹೀಗೆ ಒಂದು ಪೈಸೆ ಪ್ರಯೋಜನಕ್ಕೆ ಬಾರದವರೊಂದಿಗೇನೇ ಅವಳಿಗೆ ದೋಸ್ತಿ. ಇವರನ್ನ ಒಳಬಿಟ್ಟುಕೊಂಡರೆ ತಿರುಗಿ ನಮ್ಮ ಜೋಬಿಗೇ ಕುತ್ತು. ಈ ಬರಹಗಾರರ ಅವತಾರ ನೋಡಬೇಕು, ಆ ಕಾಟನ್ ಜುಬ್ಬಾಗಳೇನು, ಕೈಮಗ್ಗದ ಜೋಳಿಗೆಗಳೇನು, ಹತ್ತಿಯ ಸೀರೆಗಳೇನು, ದಪ್ಪ ಗಾಜಿನ ಕನ್ನಡಕವೇನು. ತಮ್ಮಿಂದಲೇ ಜಗತ್ತು ನಡೆಯುತ್ತಿದೆ ಅನ್ನೋ ಥರ. ಎಣಿಸಿ ಹತ್ತು ಜನ ಓದದಿದ್ದರೂ ಇವರ ಧಿಮಾಕಿಗೇನೂ ಕಡಿಮೆಯಿಲ್ಲ.

"ಕಥೆಗಾರರು, ಕಲಾವಿದರು ಅಂದರೆ ಮನುಷ್ಯತ್ವದ ಮೂಲಕ್ಕೆ ಬಹಳ ಹತ್ತಿರವಿರುವವರು ಅಂತ ಅಣ್ಣಾ. ದಯವಿಟ್ಟು ಅವರನ್ನ ಹಾಗೆಲ್ಲ ಆಡಿಕೊಳ್ಳಬೇಡ" ಎಂದು ತಿರುಗಿ ನನಗೇ ಬುದ್ಧಿ ಹೇಳುತ್ತಾಳೆ. ಏನೋ ನಾನು ಆಡಿಸಿ ಬೆಳೆಸಿದ ಕೂಸು, ಯಾವುದೋ ಕಾರಣದಿಂದ ವೈಯಕ್ತಿಕ ಕಷ್ಟದಲ್ಲಿದ್ದಾಳೆ ಅಂತ ಸುನೇತ್ರಳನ್ನು ನಮ್ಮ ಪಬ್ಲಿಕೇಷನ್ನಿನಲ್ಲಿ ಎಡಿಟರ್ ಎಂಬ ಸ್ಥಾನ ಕೊಟ್ಟು ಕೂಡಿಸಿದೆ. ಮಗಳ ಹೆಸರನ್ನು ಇಡದಿದ್ದರೆ ಅಪ್ಪನ ಪ್ರಾವಿಡೆಂಟ್ ಫಂಡಿನ ಹಣವನ್ನು ಕೊಡುವುದಿಲ್ಲ ಅಂತ ಅಮ್ಮ ಪಟ್ಟು ಹಿಡಿದಿದ್ದಕ್ಕೆ ಪಬ್ಲಿಕೇಷನ್ನಿಗೂ ಅವಳ ಹೆಸರನ್ನೇ ಇಟ್ಟಾಯಿತು. ಹಾಗಂತ ಇವಳು ಇದು ತನ್ನದೇ ಕಂಪನಿ ಎಂದು ಮೆರೆಯಲು ಶುರುಮಾಡಿದರೆ ಹೇಗೆ?

ಅವಳಿಗೆ ದಾದಾ ಮತ್ತು ಅವನಂಥವರ ಕುರಿತು ಜೀವನಾಧಾರಿತ ಪುಸ್ತಕ ಪ್ರಕಟಿಸಲು ಇಷ್ಟವಿಲ್ಲ. "ಅವನನ್ನ ನಾವೇ ಹೀರೊ ಮಾಡಿದಂತಾಗುವುದಿಲ್ಲವೇ ಅಣ್ಣಾ. ಸಣ್ಣ ಸಣ್ಣ ಮಕ್ಕಳೆಲ್ಲ ಅವನನ್ನ ಹುತಾತ್ಮನೆಂದು ತಿಳಿದರೇನು ಗತಿ? ಮತ್ತು ಆ ರಾಕೇಶ ಬರೆದ ಡ್ರಾಫ್ಟನ್ನು ಓದಿದಿಯೇನು? ಪುಟಪುಟಕ್ಕೆ ಕೊಚ್ಚಿ ಹಾಕ್ತೀನಿ, ಸುವ್ವರ್ನ ಎತ್ತಿ ಬಿಡ್ತೀನಿ... ಇಂಥವೇ ಪದಗಳಿವೆ" ಅಂತ ಉರಿದುರಿದು ಬೀಳುತ್ತಾಳೆ. ಮೊನ್ನೆ ಇಂಥ ಪುಸ್ತಕಗಳಿಂದ ಯಾರಿಗೇನು ಲಾಭ ಅಂತ ನನಗೇ ಕೇಳಿದಳು. ಯಾರಿಗೆ ಲಾಭವಾಗುತ್ತದೋ ಇಲ್ಲವೋ, ನಮಗಂತೂ ಪಕ್ಕಾ ಹಣದ ಸುರಿಮಳೆಯೇ